ಶ್ರೀ ಭೀಮಣ್ಣ ಖಂಡ್ರೆ.—ಸರ್ಕಾರದ ಧೋರಣೆ ಏನು ಇರುತ್ತದೆ ಅದು ಸ್ಪಷ್ಟವಾಗಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳುತ್ತಿದ್ದೇನೆ. ಹಳ್ಳಿಗಳಲ್ಲಿ ಏನಾದರೂ ಕೊಲೆ ಜಗಳ, ಇವೇ ಮುಂತಾದ ದುಶ್ಕೃತ್ಯಗಳು ನಡೆದಾಗ ಯಾರು ಇದನ್ನು ನೋಡಿಕೊಳ್ಳಬೇಕೆಂಬುದರ ಬಗ್ಗೆ, ಸರಪಂಚರು ಪಟೇಲರು, ಮತ್ತು ದಳಪತಿ ಇಪರು ಮೂವರಲ್ಲಿಯೂ ಜಗಳ ಉಂಟಾಗಿರುತ್ತದೆ. ಆದ್ದರಿಂದ ತಮ್ಮ ಸ್ಪಷ್ಟವಾದ ಧೋರಣೆ ಏನು ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಎಲ್ಲೆಲ್ಲಿ ದಳಪತಿಗಳೆಂದು ನೇಮಕ ಮಾಡಿದ್ದೇವೆ, ದಳಪತಿಗಳಿಗೆ ಏನು ಅಧಿಕಾರ ಕೊಟ್ಟಿರುತ್ತೇವೆ ಆ ಅಧಿಕಾರ ಮತ್ಯಾರಿಗೂ ಇರುವುದಿಲ್ಲವೆನ್ನುವುದೇ ನಮ್ಮ ಸ್ಪಷ್ಟವಾದ ದೋರಣೆಯಾಗಿರುತ್ತದೆ. ಅಂಥ ಜಗಳವೇನಾದರೂ ನಡೆಯುತ್ತಿದ್ದರೆ ನೀವೇ ಅದನ್ನು ಸರಿಪಡಿಸಿ. ನಿಮ್ಮ ಕೈಯಲ್ಲಿ ಆಗದಿದ್ದರೆ ನಮಗೆ ತಿಳಿಸಿ ಆದನ್ನು ನಾವು ಸರಿಪಡಿಸುತ್ತೇವೆ. ಹಿಂದೆ ಪೋಲೀಸ್ ಪಟೇಲರೆಂದು ಯಾರ ಕಡೆಯಿಂದ ಕೆಲಸ ತೆಗೆದುಕೊಳ್ಳುತ್ತಿದ್ದೆವು ಕೆಲವು ಸಂದರ್ಭಗಳಲ್ಲಿ ಸಂಬಳವಿಲ್ಲದೆ ಕೆಲಸ ಮಾಡುತ್ತಿದ್ದುದು ಇರುತ್ತದೆ. ನಿನ್ನ ಗಂಡ ಏನಾಗಿದ್ದಾನೆ ಎಂದು ಕೇಳಿದರೆ, ನನ್ನ ಗಂಡ ಓಲೆಕಾರ ಎಂದು ಹೇಳಿಕೊಳ್ಳುವ ಒಂದು ಅಭಿಮಾನಕ್ಕಾದರೂ ಕೆಲಸ ಮಾಡುವವರು ಇದ್ದರು. ಅವರಿಗೆ ಸಂಬಳ ೬ ರೂಪಾಯಿ ೧೦ ರೂಪಾಯಿಗಳನ್ನು ಕೊಡುವುದು ಒಂದು ರೀತಿಯ ಗೌರವ ಸಂಭಾವನೆಯಂತಿತ್ತು. They consider that it is a kind of privilege over others. ಈವಾಗ ಬಿಡಿ ನನ್ನ ಕೆಲಸ ಅಷ್ಟಿದೆ, ಇಷ್ಟಿದೆ ನನಗೆ ಕೊಡುವ ಸಂಬಳ ಕಡಿಮೆ ಎಂದು ಕೇಳುವ ಕಾಲ ಬಂದಿರುತ್ತದೆ. ತಾವು ಹೇಳಿದಹಾಗೆ ಸಧ್ಯದಲ್ಲಿ ದಳಪತಿಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ನೇಮಿಸುವುದಕ್ಕೆ ಆಗಿಲ್ಲ. Morever let me frankly inform the hon. Member that though the enactment came in 1964, the Government some what slept over the matter, and only after 1974-75 they have started looking into it seriously and we have started nominating or appointing these dalapaties,

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ೫-೬ ತಿಂಗಳಲ್ಲಿಯೇ ನೇಮಿಸುವುದಕ್ಕೆ ಸಾಧ್ಯವೇ?

ಶ್ರೀ ಡಿ. ದೇವರಾಜ ಅರಸ್.—೫-೬ ತಿಂಗಳಲ್ಲಿಯೇ ನೇಮಿಸುತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ರಾಮಾಭಟ್.—ಪಟೇಲರ ಬಗ್ಗೆ ಸಂಬಳವನ್ನು ಕೊಡುವುದರ ಬಗ್ಗೆ ಪರಿಗಣಿಸಲಾಗುತ್ತಿದೆ ಎಂದು ಹೇಳಿದಿರಿ. ಅದರಂತೆ ದಳಪತಿಗಳಿಗೂ ಸಂಬಳವನ್ನು ಕೊಡುವುದರ ಬಗ್ಗೆ ಸರ್ಕಾರದ ಆಲೋಚನೆ ಇರುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್.—ದಳಪತಿಗಳಿಗೆ ಸಂಬಳವೇ ಇರುವುದಿಲ್ಲ.

ಶ್ರೀ ಎಚ್. ಡಿ. ಚೌಡಯ್ಯ.—ಒಂದು ಶಂಕೆ ಎಂದರೆ ದಳಪತಿಗಳನ್ನು ೫-೬ ತಿಂಗಳಲ್ಲಿಯೇ ನೇಮಕ ಮಾಡುತ್ತೇವೆಂದು ಹೇಳಿರುತ್ತೀರಿ. ಅವರನ್ನು ನೇಮಕ ಮಾಡುವತನಕ ಯಾರು ಈ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುವವರು ?

ಶ್ರೀ ಡಿ. ದೇವರಾಜ ಅರಸ್.—ಹಿಂದೆ ಯಾರು ಪಟೇಲರು ಇಲ್ಲದಿದ್ದಾಗ ಕೆಲಸ ಯಾತರೀತಿ ನಡೆಯುತ್ತಿತ್ತು ಅದೇ ರೀತಿ ನಡೆಯುತ್ತದೆ.

Disposal of loan applications by the Karnataka State Scheduled Caste Finance Corporation.

731 SRI M. SRINIVAS (Srirangapatna).—Will the Minister for Law Social Welfare and Backward Classes be pleased th State :—

(*a*) the number of loan applications received by the Karnataka State Scheduled Castes Finance Corporation from Srirangapatna Taluk

(*b*) of them, how many have been disposed off;

(*c*) if they are not disposed off, the reasons therefor?

SRI L. G. HAVANUR (Minister for Law, Social Welfare and Backward Classes).—

(*a*) 1,514.

(*b*) 7.

(*c*) As allotment of Rs. 12,450 earmarked for Srirangapatna Taluk was fully utilised the remaining applications could not be considered.

SRI M. SRINIVAS.—Out of 1,514 applications only 7 have been disposed off, which comes to less than. 5% How only a small sum of Rs. 12,450 was earmarked for Srirangapatna Taluk?

† SRI L. G HAVANUR —The amount allotted to each taluk has revelance to the percentage of population of SC/STs in that particular taluk.

SRI M. SRINIVAS.—In what manner the 7 applications were disposed of ?

SRI L. G. HAVANUR.—On the basis of the recommendations received from the District Social Welfare Officer, Block Development Officer and other officers.

SRI C. M. ARUMUGHAM.—From the inception of the Karnataka State Scheduled Caste Finance Corporation how many applications were received and how many were disposed of ?

SRI L. G. HAVANUR.—These figures relate to Srirangapatna Taluk and they relate to the entire period, that is to say from the date of inception of the Corporation.

SRI C. M. ARUMUGHAM.—Is it not a fact that funds are sanctioned for this Corporation year by year to meet the needs of the applicants, and if so what is the amount of loan given to the Corporation from its inception to this particular taluk ?

SRI L. G. HAVANUR.—My submission is that this question cannot flow from the main question.

MR. SPEAKER.—The Hon'ble Minister may please furnish year-wise information afterwards.

SRI L. G. HAVANUR.—I will furnish the figures.

SRI C. M. ARUMUGHAM.—I am asking the Hon'ble Minister to give me the break up of the loan granted to the Corporation from the year 1975-76 onwards !

SRI L. G. HAVANUR.—Answer to that question is not presently available.

SRI M. SRINIVAS.—Does this Corporation still receiveing loan applications ?

SRI L. G. HAVANUR.—We have not prohibited any taluk from sending applications.

SRI M. SRINIVAS.—When such a big list is still pending, why should the time of the people be wested in making applications, and whether the Government is satisfied with the pr gress? Whether the Government will increase the funds and consider the applications?

SRI L. G. HAVANUR.—All the applications sent to the Corporation have been duly considered, and having regard to the amount allotted to that particular taluk we found only 7 applications were eligible.

Provident Fund benefits to Beedi Workers.

43. SRI U. T. FAREED (Ullal).—Will the Minister for Labour and Excise be pleased to state.—

(*a*) whether the Beedi Rollers in the State are entitled for Provident Fund benefit.

(*b*) if so, the number of beedi manufacturers who have implemented this scheme for the benifit of the beedi workers?

SRI R. S. PATIL (Minister for Labour and Excise).—

(*a*) Yes.

(*b*) 48.

ಶ್ರೀ ಯು. ಟಿ. ಫರೀದ್.—ಸ್ವಾಮಿ, ಈ ಪ್ರಶ್ನೆಯ (ಆ) ಗೆ ಉತ್ತರವಾಗಿ ೪೮ ಮಂದಿ ಎಂದು ಹೇಳಿದ್ದೀರಿ. ಇದರಲ್ಲಿ ಯಾರಾದರೂ ಕೂಡ ಮ್ಯಾನುಫ್ಯಾಕ್ಚರರ್ಸ್ ಇದ್ದಾರೆಯೇ?

† ಶ್ರೀ ಆರ್. ಎಸ್. ಪಾಟೀಲ್.—ಈ ಒಂದು ಯೋಜನೆ ಏನು ಇದೆ ಇದು ನಮ್ಮ ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿಲ್ಲಾ. ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟದ್ದು. ಆದುದರಿಂದ ಈ ಪ್ರಶ್ನೆಯನ್ನು ಲೋಕಸಭೆಯಲ್ಲಿ ಕೇಳಿದ್ದರೆ ಸರಿಯಾದ ಉತ್ತರ ಬರುತ್ತಿತ್ತು? ಆದಾಗ್ಯೂ ಕೂಡ ಇದರ ಬಗ್ಗೆ ನಮ್ಮ ಕರ್ನಾಟಕದಲ್ಲಿರತಕ್ಕಂಥಾ ಪ್ರಾವಿಡೆಂಟ್ ಫಂಡ್ ಕಮೀಷನರ್‌ರವರನ್ನು ಕೇಳಿಕೊಂಡು ಮೇಲೆ ಅವರು ಈ ರೀತಿ ಒಂದು ಅಂಕಿಅಂಶಗಳನ್ನು ಒದಗಿಸಿದ್ದಾರೆ ಅದು ಈ ರೀತಿ ಇದೆ.

No. of Pay Establishments	...	140
No. of employees approximately	...	1,86,210
No. of Subscribers	...	1,47,969
Establishment Complying	...	50
Non complaying	...	90

ಇದರಲ್ಲಿ ಸುಮಾರು ೧೮ ಜನರು ಸುಪ್ರೀಂ ಕೋರ್ಟಿಗೆ ಮತ್ತು ಹೈಕೋರ್ಟಿಗೆ ಹೋಗಿದ್ದಾರೆ. ಆದ್ದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಉತ್ತರ ಹೇಳುವುದಕ್ಕೆ ಕಷ್ಟವಾಗುತ್ತದೆ.